**ಓ ಎಸ್ ನಂ 415/2021**

**ಪಿ. ಡಬ್ಲ್ಯೂ ಃ 1**

**ದಿಃ 4.10.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಎಸ್ ಪಿ ಕೆ ವಕೀಲರಿಂದ**

ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿದ್ದೇನೆ. ದಾವೆ ಹಾಕಲು ನಾನೇ ಮಾಹಿತಿ ಕೊಟ್ಟಿದ್ದೇನೆ. ನಾನು ನನ್ನ ಪರವಾಗಿ ಮತ್ತು ನನ್ನ ಮೈನರ್ ಮಗನಾದ ಸಾಮ್ರಾಟ್ ಇವರ ಪರವಾಗಿ ಕೇಸ್ ಮಾಡಿದ್ದೇನೆ. ನನ್ನ ದ್ಯುತಿ ಇವಳ ಮೇಲೆ ಕೇಸ್ ಹಾಕಿದ್ದೇನೆ. ಅವಳು ಸಹ ನಮ್ಮ ಮಗಳು ಇರುತ್ತಾರೆ. ಆಕೆ ನನ್ನ ಗಂಡನ ಮೊದಲನೇ ಹೆಂಡತಿ ಮಗಳು ಇರುತ್ತಾಳೆ. ಮೊದಲನೇ ಹೆಂಡತಿಯು ದಿನಾಂಕ ಃ 20.09.2016 ರಂದು ತೀರಿಕೊಂಡಿದ್ದಾರೆ. ಪ್ರತಿವಾದಿಯು ಯಾವಾಗ ಹುಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಬೆಂಗಳೂರಿನಲ್ಲಿಯೂ ಒಂದು ಕೇಸ್ ಹಾಕಿದ್ದೇನೆ ಎಂದರೆ ಸರಿ. ಹೈಕೋರ್ಟ್ ನಲ್ಲಿಯು ಕೇಸ್ ಹಾಕಿದ್ದೇನೆ. ಆ ಕೇಸ್ ನ್ನು ನಾನು ಮೊದಲು ಹಾಕಿದ್ದೇನೆ. ಈ ಕೇಸ್ ನಲ್ಲಿ ಆ ಕೇಸ್ ನ ವಿಷಯ ಬರೆಸಬಹುದಾಗಿತ್ತು ಎಂದರೆ ಸರಿ.

ನನ್ನ ಗಂಡ ಪ್ರಾಥಮಿಕ ಶಾಲಾ ಶಿಕ್ಷಕರಿದ್ದರು. ಅವರ ಪೆನ್ಸನ್ ಮತ್ತು ಇತರೇ ಸವಲತ್ತುಗಳಲ್ಲಿ ನನಗೆ ಭಾಗ ಬರಬೇಕೆಂದು ಕೇಸ್ ಮಾಡಿದ್ದೇವೆ. ಆ ಸಂದರ್ಭದಲ್ಲಿ ಪ್ರತಿವಾದಿಯನ್ನು ಪಾರ್ಟಿ ಮಾಡಿರಲಿಲ್ಲ. ಅವಳನ್ನು ಪಾರ್ಟಿ ಮಾಡಲು ನಮಗೆ ಯಾವುದೆ ತೊಂದರೆ ಇರಲಿಲ್ಲ. ಕೆ ಎ ಟಿ ಯಲ್ಲಿ ಹಾಕಿದ ಅರ್ಜಿಯಲ್ಲಿ ಪ್ರತಿವಾದಿಯನ್ನು ಪಾರ್ಟಿ ಮಾಡಿಲ್ಲ ಎಂದು ಈ ದಾವೆಯಲ್ಲಿ ಹೇಳಿಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಎಸ್ ಪಿ ಕೆ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**